ಅದಕ್ಕೆ ಕಾರಣವೇನು? ಯಾಕೆ ಹೀಗಾಗಿದೆ ಎನ್ನುವ ಬಗ್ಗೆಯೂ ವಿಚಾರಣೆ ಮಾಡುತ್ತೇವೆ. ಈ ರೀತಿ ಆಗದ ಹಾಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಸೂಕ್ತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

(ಒ) ವಿಷಯ : ಸಿರಗುಪ್ಪದಲ್ಲಿ ನಡೆದ ಪೋಲೀಸ್ ಲಾಠಿ ಛಾರ್ಜ್ ಬಗ್ಗೆ

ಶ್ರೀ ಎಂ. ಎಸ್. ಸೋಮಲಿಂಗಪ್ಪ ಸಿರಗುಪ್ಪ) : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಪೋಲೀಸ್ ಲಾಠಿ ಛಾರ್ಜ್‌ನಿಂದು ಒಬ್ಬರು ಸತ್ತಿದ್ದಾರೆ. ಅದರ ಬಗ್ಗೆ ಒಂದು ನಿಮಿಷ ಮಾತನಾಡಬೇಕು.

ಅಧ್ಯಕ್ಷರು : ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ನೋಟೀಸ್ ಕಳುಹಿಸಬೇಕು.

ಶ್ರೀ ಎಂ.ಹೆಚ್.ಎಸ್. ಸೋಮಲಿಂಗಪ್ಪ : ನೋಟೀಸ್ ಕಳುಹಿಸಿ ಮೂರು ದಿವಸ ಆಯಿತು

ಅಧ್ಯಕ್ಷರು : ನೋಟೀಸ್ ಕಳುಹಿಸಿ ನಾಳೆ ಅವಕಾಶ ಮಾಡಿಕೊಡುತ್ತೇನೆ.

ಓ) ಕರ್ನಾಟಕ ರಾಜ್ಯ ಪತ್ರದಲ್ಲಿ ಸರ್ಕಾರಿ ಆದೇಶಗಳ ಆಂಗ್ರಭಾಷೆಯಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಒಂದು ನಿಮಿಷ ಹೇಳುತ್ತೇನೆ. ಸ್ವಲ್ಪ ಕುಳಿತುಕೊಳ್ಳಿ. ತಾವು ಏಳುವ ಉದ್ವೇಗದಲ್ಲಿ ನಾನು ಏನು ಹೇಳಬೇಕು ಎಂದು ಅರ್ಥ ಆಗುವುದಿಲ್ಲ. ಈ ಸರ್ಕಾರದ ನೀತಿ 'ಆಡಳಿತ ಭಾಷೆ ಕನ್ನಡ' ಮಾನ್ಯ ಮುಖ್ಯಮಂತ್ರಿಗಳಲ್ಲಿ ಗಮನ ಸೆಳೆಯುತ್ತಿದ್ದೇನೆ. ಸರ್ಕಾರದ ನೀತಿ ಹಾಗು ಆಡಳಿತ ಭಾಷೆ ಕನ್ನಡ. ಆದರೆ ಸರ್ಕಾರದ ಎಲ್ಲಾ ಆದೇಶಗಳೂ ಇಂಗ್ಲೀಷ್‌ನಲ್ಲಿವೆ. ಉತ್ತರ ಕೊಟ್ಟಿರತಕ್ಕದ್ದು ಇಂಗ್ಲೀಷ್, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಕನ್ನಡದಲ್ಲಿ ಕೊಡಲೇ ಇಲ್ಲ, ಇದು ಇಂಗ್ಲೀಷ್‌ನಲ್ಲಿದೆ. ಐಪಿಡಿ ಸಾಲಪ್ಪನವರು ಪೌರ ಕಾರ್ಮಿಕರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಅವರು ಕೊಟ್ಟಿರತಕ್ಕ ವರದಿ ಯಥಾವತ್ತಾಗಿ ಇಂಗ್ಲೀಷ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಪತ್ರದ ಪ್ರತಿ ಒಂದು ಆದೇಶಗಳೂ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೋಡಿ ಎಲ್ಲಾ ಇಂಗ್ಲೀಷ್‌ನಲ್ಲಿದೆ. ಒಂದಾದರೂ ಕನ್ನಡದಲ್ಲಿ ಇದೆಯೇ? ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ನೋಡಿ ಪ್ರತಿ ಒಂದು ಆದೇಶ ಇಂಗ್ಲೀಷ್‌ನಲ್ಲಿದೆ. ನಮಗೆ ಒದಗಿಸಿರುವುದು, ಇಡೀ ಸದನಕ್ಕೆ ಒದಗಿಸಿರುವುದು ಎಲ್ಲಾ ಕನ್ನಡ ಇದೆಯೇ, ಇಲ್ಲ ಇಂಗ್ಲೀಷ್‌ನಲ್ಲಿದೆ. ತಮಗೆ ಹೇಳುತ್ತೇನೆ. ಇದರಲ್ಲಿ ಯಾವುದಾದರಾದರೂ ಒಂದರ ಬಗ್ಗೆ ಸರ್ಕಾರದ ನಿಲುವು ಏನು?

ಅಧ್ಯಕ್ಷರು : ಉತ್ತರ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನಿಲುವು ಏನು ಎಂಬುದನ್ನು ಹೇಳಲಿ.

ಅಧ್ಯಕ್ಷರು : ಸರ್ಕಾರದ ನಿಲುವನ್ನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯಪತ್ರ–ಮೇಲೆ ಹೆಸರಿಗೆ ರಾಜ್ಯಪತ್ರ: ಆದರೆ ಎಲ್ಲಾ ಆದೇಶ ಇಂಗ್ಲೀಷ್‌ನಲ್ಲಿದೆ. ಆದರೆ ರಾಜ್ಯಪತ್ರದ ಹೆಸರು ಕನ್ನಡದಲ್ಲಿ ಇದೆ. ಇದರ ಬಗ್ಗೆ ನಾವೇನು ಮಾಡಬೇಕು? ಇದರ ಬಗ್ಗೆ ನಾವು ಮಾತನಾಡಬೇಕೇ ಅಥವಾ ಬಿಡಬೇಕೇ? ತಾವು ಹೇಳಿ, ಸರ್ಕಾರದ ನೀತಿ ಬಗ್ಗೆ ಹೇಳಲಿ. ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೆ, ಮಾನ್ಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿ ಒಂದು ಪುಟ-ಪುಟ ಇಂಗ್ಲೀಷ್‌ನಲ್ಲಿದೆ. ಒಂದು ಅಕ್ಷರ ಕನ್ನಡದಲ್ಲಿ ಇಲ್ಲ. ಇಡೀಪುಟ ನೋಟ ಸಂಪೂರ್ಣ ಇಂಗ್ಲೀಷ್‌ನಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಕನ್ನಡಕ್ಕೆ ಈ ಪರಿಸ್ಥಿತಿ ಆದರೆ ಹೇಗೆ? ನಮ್ಮ ರಾಜ್ಯದಲ್ಲಿ ಏಕೆ ಕನ್ನಡದಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಆಡಳಿತ ಭಾಷೆ ಕನ್ನಡ ಅಲ್ಲವೇ?

SRI MANOHAR KALLAPPA KINEKAR : We are not knowing kannada. that is why they have given it in English. (ಮಾನ್ಯ ವಾಟಾಳ್ ನಾಗರಾಜ್ ಅವರು ಕರ್ನಾಟಕ ರಾಜ್ಯ ಪತ್ರದ ಪುಟಗಳನ್ನು ಹರಿದು ಹಾಕುತ್ತಾ ಮಾತನಾಡಿದರು)

ಅಧ್ಯಕ್ಷರು : ಒಂದು ನಿಮಿಷ ಎಂದು ಹೇಳಿ ಎಲ್ಲಾ ಪುಟವನ್ನು ಕಿತ್ತು ಹಾಕುತ್ತಿದ್ದೀರಿ. ಈ ತರಹ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಒಂದಾದರೂ ಕನ್ನಡದಲ್ಲಿ ಇದೆಯಾ? ಎಲ್ಲಾ ಇಂಗ್ಲೀಷ್‌ನಲ್ಲಿದೆ.

SRI MANOHAR KALLAPPA KINEKAR : sir, we are not knowing kannada. It should be in kannada and English, both the languages.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನೀತಿ ಬಗ್ಗೆ ನೋವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ? ಅವರಲ್ಲಿ ನಾನು ಅತ್ಯಂತರ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ದಯಮಾಡಿ, ತಾವು ಆಡಳಿತ ಭಾಷೆ ಕನ್ನಡ ಎಂದು ಒಪ್ಪಿದರೆ ತಾವು ಏನು ಮಾಡಬೇಕು ಎಂದು ಹೇಳಿ.

SRI MANOHAR KALLAPPA KINEKAR : It should be in both the languages. we are not knowing kannada, so we can understand if they give it in English.

ಶ್ರೀ ವಾಟಾಳ್ ನಾಗರಾಜ್ : ಇದು ಮರಾಠಿ ರಾಜ್ಯವಲ್ಲ. ಕರ್ನಾಟಕ ರಾಜ್ಯ. ತಾವ ದಯಮಾಡಿ.

SRI MANOHAR KALLAPPA KINEKAR : We also should understand; If they give in kannada. how can be understand?

ಶ್ರೀ ವಾಟಾಳ್ ನಾಗರಾಜ್ : ಪರಿಸ್ಥಿತಿ ಎನಾಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ಪಷ್ಟನೆ ಕೊಡಬೇಕು.

(ಗೊಂದಲ)

SRI MANOHAR KALLAPPA KINEKAR : actually that should be provided in Maruthi also. That is our right.

ಶ್ರೀ ವಾಟಾಳ್ ನಾಗರಾಜ್ : ಕನ್ನಡಕ್ಕೆ ಹೋರಾಟ ಮಾಡಿದ್ದೇನೆ. ಸುಮಾರು ನಿರಂತರವಾಗಿ 40 ವರ್ಷಗಳ ಕಾಲ ಕರ್ನಾಟಕದ ಅಭ್ಯುದಯಕ್ಕೆ ಹೋರಾಟ ಮಾಡಿದ್ದೇನೆ. ನನಗೆ ನೋವಾಗುತ್ತದೆ. ಈ ಸದನದಲ್ಲಿ ನೋವಾಗುತ್ತದೆ. ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಸರ್ಕಾರದ ನಿಲವು ಏನು ಎಂದು ಸ್ಪಷ್ಟಪಡಿಸಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

SRI MANOHAR KALLAPPA KINEKAR : I can understand. In karnataka, so many minority people are also there. To safeguard the right of the minorities, it should be in English and Marathi also.

ಅಧ್ಯಕ್ಷರು : ಈಗ ಶೂನ್ಯ ವೇಳೆಯಲ್ಲಿ ವಿಚಾರ ಹೇಳುತ್ತಿದ್ದಾರೆ. ಈಗ ಯಾರು ಉತ್ತರ ಕೊಡುತ್ತಾರೆ?

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿ ಭಾಷೆಯಲ್ಲಿ ಮಾತನಾಡಿದರು)

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರು ಉತ್ತರ ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ವಾಟಾಳ್ ನಾಗರಾಜ್ ಅವರು.....

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾಳೆ ಅವರು ಸಂಸ್ಕೃತ ಮಾತನಾಡುತ್ತೇವೆಂದು ಹೇಳುತ್ತಾರೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ ಅವರು ಮರಾಠಿಯಲ್ಲಿ ಮಾತನಾಡುತ್ತಿದ್ದರು)

ಶ್ರೀ ಹೆಚ್.ಕೆ. ಪಾಟೀಲ್ : ಕನ್ನಡದಲ್ಲಿ ನಾವು ಯಾವುದೆ ಆದೇಶ ಕೊಡದೇ ಇದ್ದರೆ ಆರೋಪಕ್ಕೆ ನಾವು ಹೊಣೆಗಾರರು ಆಗುತ್ತೇವೆ. ಆದರೆ ಕನ್ನಡ ಆಡಳಿತ ಭಾಷೆಯನ್ನು 100ಕ್ಕೆ 100ರಷ್ಟು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದನ್ನು ಬಿಟ್ಟು ಯಾರು ಏನೇ ಹೇಳಿದರೂ ಕೇಳುವುದಿಲ್ಲ. ಕನ್ನಡಕ್ಕೆ ಅಗ್ರಸ್ಥಾನ ಇದೆ. ಯಾರು ಏನೇ ಹೇಳಿದರೂ ಕನ್ನಡಕ್ಕೆ ಅಗ್ರಸ್ಥಾನ ಇದೆ. ಅದನ್ನು ನಾವು ಕೊಟ್ಟೇ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಬೇಕಾದರೆ ಗೌರವವಾಗಿ ಅವರು ಈ ಸದನದಲ್ಲಿ ಇರಲಿ. ಇಲ್ಲವಾದರೆ ಗೌರವವಾಗಿ ಅವರು ಮಹಾರಾಷ್ಟ್ರ ಹೋಗಬಹುದು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಅವರ ನೋವನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದೇಶವನ್ನು ಕನ್ನಡದಲ್ಲಿ ಕೊಟ್ಟಿಲ್ಲ. ಇಂಗ್ಲೀಷ್‌ನಲ್ಲಿ ಮಾತ್ರ ಕೊಟ್ಟಿದ್ದಾರೆ ಎನ್ನುವಂತಹದನ್ನು ನಮಗೆ ಅವರು ಒಂದೊಂದಾಗಿ ತೋರಿಸಿದ್ದರು. ಒಂದೇ ಆದೇಶವನ್ನು ಬೇರೆ ಬೇರೆ ಪಾರ್ಟ್ ಮಾಡಿ ಕೊಟ್ಟರೋ ಏನೋ ನೋಡಲಿಲ್ಲ. ದಯಮಾಡಿ ಅದನ್ನು ಕೊಡಿ. ಕನ್ನಡದಲ್ಲಿ ಇಲ್ಲದೇ ಇದ್ದರೆ ಅದನ್ನು ತಕ್ಷಣ ಕನ್ನಡೀಕರಣ ಮಾಡಿ ನಾವು ಅದನ್ನು ತಮಗೆ ಒದಗಿಸುತ್ತೇವೆ. ಹಾಗೂ ಇನ್ನು ಮುಂದೆ ಎಲ್ಲಾ ಆದೇಶಗಳನ್ನೂ ಸಹಿತ ಕನ್ನಡದಲೇ ಹೊರಡಿಸತಕ್ಕ ಸರ್ವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಅಧ್ಯಕ್ಷರು : ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2.08ಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3.22ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)